ಜ್ಞಾನೋದಯ – ಎಂದರೆ ಸುಖದ ಮೂಲವೇ; ಅದನ್ನು ಆನಂದ, ನಿರ್ವಾಣ – ಎಂದೆಲ್ಲ ಕರೆಯುವುದುಂಟು. 'ನಿನ್ನ ಬಯಕೆ ಏನು?' 'ನೀನು ಏನನ್ನು ಅರಸುತ್ತಿರುವೆ?' ಎಂದು ಶಿಷ್ಯನನ್ನು ಗುರು ಕೇಳಿದಾಗ ಅವನು ಕೊಟ್ಟ ಉತ್ತರ: 'ಜ್ಞಾನೋದಯ'. ಎಲ್ಲ ದುಃಖಗಳಿಂದಲೂ ಬಿಡುಗಡೆಯನ್ನು ಬೇಡುವ ಬಯಕೆ ಈ 'ಜ್ಞಾನೋದಯ'ದ ಕಲ್ಪನೆಯಲ್ಲಿ ಹರಳುಗಟ್ಟಿದೆ. ಎಂದರೆ ಅವನು ಸುಖವನ್ನು ಹುಡುಕುತ್ತಿದ್ದಾನೆ; ಆ ಸುಖವನ್ನು ಅವನು ಹೊರಗಿನ ಪ್ರಪಂಚದಲ್ಲಿ ಹುಡುಕುತ್ತಿದ್ದಾನೆ. ಆದರೆ ಝೆನ್‌ಗುರು ಹೇಳುತ್ತಿರುವುದು: 'ಸುಖ ಎನ್ನುವುದು ಎಲ್ಲೋ ನಿನ್ನಿಂದ ಹೊರಗೆ, ದೂರದಲ್ಲಿ ಇಲ್ಲ; ಆ ಸುಖದ ನಿಧಿ ನೀನೇ ಆಗಿರುವೆ.' ನಾವು ಸುಖವನ್ನು ಹೊರಗಿನ ವಸ್ತುಗಳಲ್ಲಿ, ಬಾಹ್ಯಜಗತ್ತಿನಲ್ಲಿ ಹುಡುಕುತ್ತೇವೆ. ಆದರೆ ನಿಜವಾದ ಸುಖ – ಆನಂದ – ಇರುವುದು ನಮ್ಮ ಅಂತರಂಗದಲ್ಲಿಯೇ. ನಮ್ಮ ಮನಸ್ಸು ಮತ್ತು ಬುದ್ಧಿಗಳು ನಮ್ಮ ಸುಖದ ಕಲ್ಪನೆಯನ್ನು ನಿಯಂತ್ರಿಸುತ್ತಿರುತ್ತವೆ; ಮಾತ್ರವಲ್ಲ, ಇದು ಸುಖ, ಇದು ದುಃಖ – ಎಂಬ ವಿಂಗಡಣೆಯನ್ನು ಮಾಡುವ ಮೂಲಕ ತೊಂದರೆಯನ್ನೇ ಕೊಡುತ್ತಿರುತ್ತವೆ. ಹೊರಗೆ ಎಷ್ಟೆಲ್ಲ ವಸ್ತುಗಳು ಇದ್ದರೂ ನಮ್ಮ ಒಳಗೆ ಸುಖದ ಮೂಲ ಇಲ್ಲದೆ ಹೋದರೆ ಆ ವಸ್ತುಗಳಿಂದ ಸುಖವನ್ನು ಅನುಭವಿಸಲು ಸಾಧ್ಯವಾಗದು. ಅಷ್ಟೇ ಅಲ್ಲ, ಹೊರಗಿನ ವಸ್ತುಗಳು ನಮ್ಮ ಸುಖವನ್ನು ನಿರ್ಧರಿಸಲಾರವು ಕೂಡ. ನಾವು ಇದರಿಂದ ಸುಖ, ಅದರಿಂದ ದುಃಖ – ಎಂದು ಮೊದಲೇ ಮನಸ್ಸಿನಲ್ಲಿ ಗುಣಿಸಿಕೊಂಡು ಅದರಂತೆ ನಮ್ಮ ಸುಖ–ದುಃಖಗಳ ಅನುಭವವನ್ನು ಸೃಷ್ಟಿಸಿಕೊಳ್ಳುತ್ತಿರುತ್ತೇವೆ. ಆದರೆ ದಿಟವಾದ ಸುಖ–ದುಃಖಗಳು ನಮ್ಮ ಒಳಗಡೆಯೇ ಇವೆ. 'ಮನಸ್ಸೇ ನಮ್ಮ ಬಂಧನ ಮತ್ತು ಬಿಡುಗಡೆಗೆ ಕಾರಣ' ಎನ್ನುವ ಮಾತೊಂದು ತುಂಬ ಪ್ರಸಿದ್ಧವಾಗಿದೆ. ನಮ್ಮ ಮನಸ್ಸು ಯಾವುದೋ ಒಂದು ವಸ್ತುವನ್ನು 'ಇದು ನನಗೆ ಸಂತೋಷವನ್ನು ಕೊಡುತ್ತದೆ' ಎಂಬುದನ್ನು ಊಹಿಸಿಕೊಂಡು ಅದರ ಬಗ್ಗೆ ಮೋಹವನ್ನು ಬೆಳೆಸಿಕೊಳ್ಳುತ್ತದೆ; ಹೀಗೆಯೇ, ಮತ್ತಾವುದೋ ಇನ್ನೊಂದು ವಸ್ತುವಿನ ಬಗ್ಗೆ 'ಇದು ನನ್ನ ದುಃಖಕ್ಕೆ ಕಾರಣ' ಎಂದು ದ್ವೇಷವನ್ನು ಸೃಷ್ಟಿಸಿಕೊಳ್ಳುತ್ತದೆ. ಮಾತ್ರವಲ್ಲ, ಒಂದೇ ವಸ್ತು ಒಮ್ಮೆ ನಮಗೆ ಪ್ರಿಯವಾಗಿಯೂ ಮತ್ತೊಮ್ಮೆ ಅಪ್ರಿಯವಾಗಿಯೂ ಕಾಣಬಹುದು. ಹಾಗಾದರೆ ಸುಖದ ಮೂಲ ಏನು? ನಾವೇ, ನಮ್ಮ ಮನಸ್ಸೇ ಅಲ್ಲವೆ! ನಾವು ಸುಖವನ್ನು ಎಲ್ಲೋ ಹುಡುಕಬೇಕಿಲ್ಲ; ಸುಖ–ದುಃಖಗಳನ್ನು ಕುರಿತು ನಮ್ಮ ಪೂರ್ವಗ್ರಹಗಳನ್ನು ಕಳಚಿಕೊಳ್ಳಬೇಕಷ್ಟೆ. ಅಂಥ ತಿಳಿವಳಿಕೆಯ ಕಡೆಗೆ ಈ ಕತೆ ನಮ್ಮನ್ನು ಸೆಳೆಯುತ್ತಿದೆ; ನಿಧಿಯನ್ನು ನಮ್ಮಲ್ಲಿಯೇ ಇಟ್ಟುಕೊಂಡು ಬೇರೆಲ್ಲೋ ಸಾಲಕ್ಕಾಗಿ ಅಲೆಯುವಂಥ ದುಃಸ್ಥಿತಿಯನ್ನು ಕಂಡು ನಮ್ಮನ್ನು ಎಚ್ಚರಿಸುತ್ತಿದೆ. ಸೂಫಿಸಂತ ರೂಮಿಯ ಮಾತೊಂದು ಇಲ್ಲಿ ಮನನೀಯ: 'ನೀನು ಸಾಗರದಲ್ಲಿರುವ ಹನಿಯಲ್ಲ; ಹನಿರೂಪದಲ್ಲಿರುವ ಪೂರ್ಣಸಾಗರ ನೀನು.' ಮೇಲಿನ ಕಥೆಗೆ ವ್ಯಾಖ್ಯಾನದಂತಿದೆ ಈ ಮಾತು.